ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ
ನ್ಯಾಯಾಲಯ, ತಿಪಟೂರು

**ಸಿ.ಸಿ. ನಂ. 750/2024**

ಸಿ.ಡಬ್ಲ್ಯು:**2**
ಪಿ.ಡಬ್ಲ್ಯು:**2**

ದಿಃ **11.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು: ಪಾಲನೇತ್ರ ಟಿ.ಎಸ್
ತಂದೆ ಹೆಸರು : ಶಂಕರಪ್ಪ
ವಯಸ್ಸು : **65** ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಟಿ.ಎಲ್ ಪಾಳ್ಯ, ತಿಪಟೂರು

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-1 ನನ್ನ ಮಗ, ಚಾಸಾ-3 ನನ್ನ ಹೆಂಡತಿ, ಚಾಸಾ-4 ನನ್ನ ಮಗ, ಚಾಸಾ-5 ಮತ್ತು 6 ನನಗೆ ಗೊತ್ತು. ಆರೋಪಿತರು ನನಗೆ ಪರಿಚಯ. ದಿಃ 27.04.2024 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ತಿಪಟೂರಿನ ಗ್ರಾಮ ದೇವತೆ ಕೆಂಪಮ್ಮ ದೇವರ ಜಾತ್ರಾ ಪ್ರಯುಕ್ತ ನಾನು ಮತ್ತು ಚಾಸಾ-1, 3 ಮತ್ತು 4 ರವರು ರಾಮೇಶ್ವರ ದೇವಸ್ಥಾನದ ಬಳಿ ಮಡಿಲಕ್ಕಿ ಹಾಕಲಿಕ್ಕೆ ಬಂದಿದ್ದೆವು. ಮಡಿಲಕ್ಕಿ ತಟ್ಟೆಯಲ್ಲಿದ್ದ ಹಣವನ್ನು ಆರೋಪಿ 1 ರವರು ಮಡಿಲಕ್ಕಿ ಹಾಕುವ ಮೊದಲೇ ಹಣವನ್ನು ಪಡೆಯುತ್ತಿದ್ದರು ಮತ್ತು ನಾನು ಮಡಿಲಕ್ಕಿ ಹಾಕದೇ ಹಣ ಏಕೆ ತೆದುಕೊಳ್ಳುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ಆರೋಪಿ 1 ರವರು ನನಗೆ ಅವಾಚ್ಯ ಶಬ್ದಗಳಿಂದ ಬೋಳಿ ಮಗನೆ ಸೂಳೇಮಗನೆ ಎಂದು ಬೈದನು. ಆರೋಪಿ 1 ರವರ ಮಗ ಆರೋಪಿ 2 ರವರು ಸಹ ಅಲ್ಲಿಗೆ ಬಂದು ನಮಗೆ ಅವಾಚ್ಯ ಶಬ್ದಗಳಿಂದ

ಬೈದನು. ನಂತರ ಮಂಗಳಾರತಿಯನ್ನು ಮುಗಿಸಿಕೊಂಡು ನಾವು ದೇವಸ್ಥಾನದ ಹೊರಗೆ ಬಂದಾಗ ಆರೋಪಿ 1 ಮತ್ತು 2 ರವರು ನನಗೆ ಮತ್ತು ಚಾಸಾ-1, 3 ಮತ್ತು 4 ರವರಿಗೆ ಅಡ್ಡಗಟ್ಟಿ ಕೊಲೆ ಬೆದರಿಕೆ ಹಾಕಿದನು. ಆರೋಪಿ 1 ರವರು ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1 ರವರಿಗೆ ತಲೆಯ ಬಲಭಾಗಕ್ಕೆ ಹಲ್ಲೆ ಮಾಡಿದನು. ನಾನು ಮತ್ತು ಚಾಸಾ-3 ಮತ್ತು 4 ಬಿಡಿಸಲು ಹೋದಾಗ ಆರೋಪಿ 2 ರವರು ಒಂದು ಕುಡುಗೋಲು ತೆಗೆದುಕೊಂಡು ಬಂದನು. ನಾನು ಬಿಡಿಸಲು ಹೋದಾಗ ಆತ ಕುಡುಗೋಲನ್ನು ಬಿಸಾಕಿದನು. ಆರೋಪಿ1 ರವರು ನನ್ನ ಹೆಂಡತಿ ಎಂದರೆ ಚಾಸಾ-3 ರವರಿಗೆ ಮುಖಕ್ಕೆ ಪರಚಿ ಬೆನ್ನಿಗೆ ಗುದ್ದಿದನು. ಆರೋಪಿ 2 ರವರು ಬಂದು ನನಗೂ ಮತ್ತು ಚಾಸಾ-4 ರವರಿಗೆ ಪರಚಿದನು. ನಂತರ ಆರೋಪಿ 2 ಈತನು ನನ್ನ ಹೆಂಡತಿಯ ಸೀರೆಯನ್ನು ಎಳೆದು ಮಾನಹಾನಿ ಮಾಡಿರುತ್ತಾನೆ. ಆಗ ಚಾಸಾ-5 ಮತ್ತು 6 ರವರು ಜಗಳನ್ನು ಬಿಡಿಸಿರುತ್ತಾರನೆ. ಆರೋಪಿತರು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಚಾಸಾ-1 ರವರಿಗೆ ರಕ್ತಸ್ರಾವ ಆಗಿ ಬಟ್ಟೆಯ ಮೇಲೆ ರಕ್ತ ಬಿದ್ದಿತ್ತು. ನಂತರ ಚಾಸಾ-1 ರವರನ್ನು ಚಾಸಾ-5 ಮತ್ತು 6 ರವರು ಆಟೋದಲ್ಲಿ ತಿಪಟೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಮರುದಿನ ಪೊಲೀಸರು ಸ್ಥಳಕ್ಕೆ ಬಂದು ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 2-15 ಗಂಟೆವರೆವಿಗೂ ಚಾಸಾ-7 ಮತ್ತು 8 ರವರ ಸಮಕ್ಷಮ ಬರೆದಿರುತ್ತಾರೆ. ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ದೊಣ್ಣೆ ಮತ್ತು ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅವುಗಳು ಈಗಾಗಲೇ ಮೂ. ಮಾ 1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಆ ಕಾಲಕ್ಕೆ 2 ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಸಿ.ಸಿ. ನಂ. 750/2024** **PW-2**

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು**)**

<u>ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ-</u>

ಮೇಲೆ ಹೇಳಿದ ದಿನಾಂಕ ಮತ್ತು ಸಮಯದಂದು ಆರೋಪಿ 2 ರವರು ಮಚ್ಚನ್ನು ತೆಗೆದುಕೊಂಡು ಬಂದಿದ್ದರು ಎಂದರೆ ನಿಜ. ಆ ರೀತಿ ನಾನು ಹೇಳಿಕೆ ನೀಡಿದ್ದೇನೆ ಎಂದರೆ ನಿಜ. ಆ ದಿನ ಕುಡುಗೋಲು ತಂದಿರಲಿಲ್ಲ ಮತ್ತು ಮಚ್ಚನ್ನು ತಂದಿದ್ದರು ಎಂದರೆ ನಿಜ.

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ಮೊಹಮ್ಮದ್ ಆರೀಫುಲ್ಲಾ ಸಿ.ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.